


ಸಂಪಾದಕೀಯ

# ಇತಿಹಾಸ ಮತ್ತು ಭಾರತ

"ನಿಮ್ಮ ಪೂರ್ವಿಕರು ಯಾರು? ಯಾವ ಜನಾಂಗಕ್ಕೆ ಸೇರಿದವರು? ಅವರದು ಏನು ಇತಿಹಾಸ?'' ಎಂದು ಯಾರಾದರೂ ಕೇಳಿದರೆ ನಾವು ಒಂದು ಗಂಟೆ ಭಾಷಣ ಕೊಡುತ್ತೇವೆ. ರಸವತ್ತಾಗಿ ರಾಮಾಯಣ, ಮಹಾಭಾರತ, ಪುರಾಣದ ಕತೆಗಳನ್ನೆಲ್ಲಾ ಹೇಳುತ್ತೇವೆ. ಹಿಂದಿನ ಮಹಾಪುರುಷರ ಉದಾತ್ತ ಕಾರ್ಯಗಳನ್ನೆಲ್ಲ ಹುರುಪಿನಿಂದ ಹೇಳಿ ಎದೆಯುಬ್ಬಿಸುತ್ತೇವೆ. ಆದರೆ ಇವೆಲ್ಲ ಇತಿಹಾಸವೆ? ನಿಜವಾಗಿಯೂ ಇತಿಹಾಸವೆಂದರೆ ನಮಗೇನಾದರೂ ಗೊತ್ತೆ? ನಮ್ಮ ಇತಿಹಾಸವನ್ನು ತಿಳಿಯುವ ಮೊದಲು ಇತಿಹಾಸವೆಂದರೆ ಏನು ಎಂಬುದಾಗಿ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ.

ಭಾರತೀಯರಿಗೆ ಇತಿಹಾಸ ಪ್ರಜ್ಞೆಯೇ ಇರಲಿಲ್ಲವೆಂದು ಅನೇಕ ಮಂದಿ ಪಾಶ್ಚಾತ್ಯ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ವೈಜ್ಞಾನಿಕವಾದ್ದದು ಏನಿದ್ದರೂ ಪಶ್ಚಿಮದಿಂದಲೇ ಬಂದಿತೆಂದು ನಂಬುವ ಆಧುನಿಕರು ಈ ವಿಷಯವನ್ನು ತರ್ಕವಿಲ್ಲದೆ ಒಪ್ಪಿಕೊಳ್ಳುತ್ತಾರೆ. ಇನ್ನು 'ನಮ್ಮಲ್ಲಿ ಎಲ್ಲವೂ ಇತ್ತು. ಪರಕೀಯರ ದಾಳಿಯಿಂದ ಎಲ್ಲವೂ ನಾಶವಾಯಿತು' ಎಂದು ಭಾವಿಸುವ ಅಭಿಮಾನಿಗಳು ಭಾರತದಲ್ಲಿ ಸಾಕಷ್ಟು ಮಂದಿ ಇದ್ದಾರೆ. ಇವರುಗಳ ಪ್ರಕಾರ ನಮ್ಮ ರಾಮಾಯಣ, ಮಹಾ ಭಾರತ, ಪುರಾಣ ಹಾಗೂ ಇನ್ನಿತರ ಗ್ರಂಥಗಳೆಲ್ಲ ಇತಿಹಾಸವಲ್ಲದೆ ಇನ್ನೇನು? ಅವರ ಪ್ರಕಾರ ವೇದೋಪನಿಷತ್ತುಗಳಿಂದ ಆರಂಭಗೊಂಡು ಇಂದಿನವರೆಗೂ ರಚಿತವಾಗಿರುವ ಅಪಾರ ಸಾಹಿತ್ಯರಾಶಿಯೆಲ್ಲ ಇತಿಹಾಸವೇ. ಈ ಎರಡು ಬಗೆಯ ಧೋರಣೆಯನ್ನು ಮತ್ತೆ ವಿಮರ್ಶೆಗೆ ಒಳಪಡಿಸುವ ಅಗತ್ಯವಿದೆ. ಭಾರತದಲ್ಲಿ ಇತಿಹಾಸವಿತ್ತು; ಆದರೆ ಆಧುನಿಕ ಇತಿಹಾಸದಂತೆ ಅವು ರಚಿತವಾಗಲಿಲ್ಲ. ಹೊಸ ದೃಷ್ಟಿಕೋನದಿಂದ ಪ್ರಾಚೀನ ಇತಿ ಹಾಸವನ್ನು ಅರಿತುಕೊಳ್ಳುವುದೇ ಭಾರತೀಯ ಇತಿಹಾಸವನ್ನು ಕಂಡುಕೊಳ್ಳುವ ವಿಧಾನ. ವಸ್ತುನಿಷ್ಠವಾದ, ವಾಸ್ತವವಾದ ಇತಿಹಾಸದ ನಿರ್ಮಾಣಕ್ಕೆ ನಮ್ಮ ಅಭಿಮಾನ, ಭಾವುಕತೆ ಅಡ್ಡಿಯಾಗುವುವು ನಿಜ; ಆದರೆ ಅದಕ್ಕಿಂತ ಹೆಚ್ಚಿನ ಅಪಾಯ ಸತ್ಯನಿಷ್ಠೆಯಿಲ್ಲದೆ ಇತರ ಹಿತಾಸಕ್ತಿಗಳಿಂದ ಇತಿಹಾಸ ರಚನೆ ಮಾಡುವ ಇತಿಹಾಸಕಾರರಿಂದ ಉಂಟಾಗುತ್ತದೆ. ಇತಿಹಾಸ ರಚನೆ ಮಾಡುವ ವ್ಯಕ್ತಿಗೆ ಸತ್ಯನಿಷ್ಠೆಯೊಂದೇ ನಿಜವಾಗಿ ಇರಬೇಕಾದ ಅರ್ಹತೆ. ಈ ದೃಷ್ಟಿಯಿಂದ ಅವರ ಬದ್ಧತೆಯನ್ನು ಪ್ರಶ್ನಿಸುವುದೂ ಮುಖ್ಯ.

## ಆಧುನಿಕ ಇತಿಹಾಸದ ವಿಧಾನ

ಪಾಶ್ಚಾತ್ಯದೇಶಗಳಲ್ಲಿ ವೈಜ್ಞಾನಿಕ ಅನ್ವೇಷಣೆ ಆರಂಭಗೊಂಡು, ಹಲವಾರು ಬಗೆಯ ಜ್ಞಾನಕ್ಷೇತ್ರಗಳು ಬೆಳೆದು ಬಂದಂತೆಲ್ಲ, ಇತಿಹಾಸವನ್ನು ವೈಜ್ಞಾನಿಕ ವಿಧಾನದಲ್ಲಿ ಅಧ್ಯಯನ ಮಾಡುವ ಕ್ರಮ ಬೆಳೆದುಬಂತು. ಇತಿಹಾಸವನ್ನು ಬರೆಯುವ ವಿಧಾನವನ್ನು Historiography ಎಂದು ಕರೆಯಲಾಗುತ್ತದೆ. 'ಇತಿಹಾಸವನ್ನು ನೀವು ಯಾವ ವಿಧಾನದಲ್ಲಿ ಬರೆಯುತ್ತೀರಿ?' ಎಂದು ಕೆಲವರು ಪ್ರಶ್ನಿಸುವುದಿದೆ. ಸಾಮಾನ್ಯವಾಗಿ ಇತಿಹಾಸವನ್ನು ಬರೆಯುವ ಎಲ್ಲರೂ ತಾವು ಬರೆದದ್ದೇ ಸತ್ಯವೆಂದು ಪ್ರತಿಪಾದಿಸುತ್ತಾರೆ. ಆದರೆ ಅವರಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ, ಬೇಕಿದ್ದೋ ಬೇಕಿಲ್ಲದೆಯೋ ಒಂದೊಂದು ಬಗೆಯ ಇತಿಹಾಸ ರಚನೆಯ ಕಡೆಗೆ ವಾಲುತ್ತಾರೆ. ಆದ್ದರಿಂದ ಇತಿಹಾಸಕಾರರನ್ನು ಕೇಂಬ್ರಿಡ್ಜ್ ಇತಿಹಾಸಕಾರರು, ರಾಷ್ಟ್ರೀಯ (Nationalist) ಇತಿಹಾಸಕಾರರು, ಕಮ್ಯುನಿಸ್ಟ್ ಇತಿಹಾಸಕಾರರು ಎಂದೆಲ್ಲ ಕರೆಯುವುದಿದೆ. ಇವರಲ್ಲಿ ಒಂದು ಪಂಥದ ಇತಿಹಾಸಕಾರರು ಹೇಳುವ ಕ್ರಮಗಳನ್ನು ಇತರರು ಒಪ್ಪದೆ ಭಿನ್ನಾಭಿಪ್ರಾಯ, ಖಂಡನೆ-ಮಂಡನೆ, ಸ್ವೀಕಾರ, ತಿರಸ್ಕಾರ ಇವೆಲ್ಲ ನಡೆಯುತ್ತವೆ. ಆದರೆ ಇತಿಹಾಸವನ್ನು ನಿರ್ಧರಿಸುವ ಆಕರಗಳು ನಿರ್ವಿವಾದವಾಗಿದ್ದರೆ ಅದನ್ನು ಎಲ್ಲರೂ ಸ್ವೀಕರಿಸಬೇಕಾಗುತ್ತದೆ. ಹಲವು ಬಾರಿ ಆಕರಗಳನ್ನು ವಿಶ್ಲೇಷಣೆ ಮಾಡುವವರು ವಿಭಿನ್ನ ಅರ್ಥಗಳಿಂದ ನಿರ್ವಿವಾದವೆಂದು ಕಾಣುವ ವಾಸ್ತವ ಸಂಗತಿಗಳನ್ನು ದಾರಿ ತಪ್ಪಿಸುವುದಿದೆ. ಈ ಎಲ್ಲ ಕಾರಣಗಳಿಂದ ವಸ್ತುನಿಷ್ಠ ಹಾಗೂ ಸತ್ಯನಿಷ್ಠ ಇತಿಹಾಸವನ್ನು ಸುಲಭವಾಗಿ ನಿರ್ಮಿಸಲಾಗದೆ, ವಿವಿಧ ಅಭಿಪ್ರಾಯ ಹಾಗೂ ಬಿಕ್ಕಟ್ಟುಗಳು ನಿರ್ಮಾಣವಾಗುತ್ತಿವೆ. ಹೀಗಿದ್ದರೂ, ಹಲವು ಇತರ ಶಾಸ್ತ್ರಗಳ (ಅಂತಃ ಶಾಸ್ತ್ರೀಯ ಅಧ್ಯಯನ) ಸಹಾಯದಿಂದ ಇತಿಹಾಸದಲ್ಲಿ ಹತ್ತಾರು ಗೊಂದಲ, ಬಿಕ್ಕಟ್ಟುಗಳ ನಿವಾರಣೆಯಾಗು

ತ್ತವೆ. ಉದಾಹರಣೆಗೆ, ಭೂಗೋಳ, ಭಾಷಾವಿಜ್ಞಾನ, ಲಿಪಿಶಾಸ್ತ್ರ, ಪ್ರಾಚ್ಯಶಾಸ್ತ್ರ, ಇತ್ತೀಚೆಗೆ ಖಗೋಳ ಹಾಗೂ ಡಿ.ಎನ್.ಎ. ತಂತ್ರಜ್ಞಾನ ಇತ್ಯಾದಿ.

## ಆಧುನಿಕ ಇತಿಹಾಸ : ಭಾರತದಲ್ಲಿ

ಭಾರತಕ್ಕೆ ಇಂಗ್ಲಿಷರ ಆಗಮನದ ನಂತರವೇ ಇಲ್ಲಿ ಐತಿಹಾಸಿಕ ಅಧ್ಯಯನ ಹಾಗೂ ಗ್ರಂಥರಚನೆ ಆಧುನಿಕ ವಿಧಾನದಲ್ಲಿ ಆರಂಭವಾಯಿತು. ಆರಂಭದಲ್ಲಿ ಈ ಎಲ್ಲ ಅಧ್ಯಯನ ಹಾಗೂ ಗ್ರಂಥರಚನೆ ಮಾಡಿದವರು ಪಾಶ್ಚಾತ್ಯ ವಿದ್ವಾಂಸರೇ; ಆದ್ದರಿಂದ ಅವರು ರಚಿಸಿದ ಭಾರತದ ಇತಿಹಾಸವನ್ನೇ ಅವಲಂಬಿಸಿ ಮುಂದೆ ಅಧ್ಯಯನ ನಡೆಸಬೇಕಾಯಿತು. ಕ್ರಮೇಣ ಇಂಗ್ಲಿಷ್ ವಿದ್ಯಾಭ್ಯಾಸ ಹಾಗೂ ವೈಜ್ಞಾನಿಕ ವಿಧಾನಗಳು ವ್ಯಾಪಕಗೊಂಡಂತೆ, ಅನೇಕ ಮಂದಿ ಭಾರತೀಯ ವಿದ್ವಾಂಸರೂ ಈ ದಿಕ್ಕಿನಲ್ಲಿ ಮುಂದುವರಿದರು. ಭಾರತೀಯ ಇತಿಹಾಸ ಹೊಸದಾಗಿ ರೂಪುಗೊಂಡದ್ದರಿಂದ, ಜಾಗತಿಕ ಮಟ್ಟದಲ್ಲೂ ಭಾರತದ ಬಗ್ಗೆ ಇದ್ದ 'ಅನಾಗರಿಕ' 'ಅಸಂಸ್ಕೃತ' ಎಂಬ ಭಾವನೆ ಬದಲಾಗಿ, ಇಲ್ಲಿನ ಶಾಸ್ತ್ರ-ಸಾಹಿತ್ಯ - ಇತಿಹಾಸಗಳ ಬಗ್ಗೆ ಪಶ್ಚಿಮದಲ್ಲಿ ಹೊಸ ಅರಿವು ಮೂಡಿತು. ಆದರೆ, ವಸಾಹತುಶಾಹಿ ಬ್ರಿಟಿಷರ ಇತಿಹಾಸ ರಚನೆ ಎಷ್ಟರ ಮಟ್ಟಿಗೆ ಸ್ವ-ಹಿತಾಸಕ್ತಿಗಳಿಂದ ಮುಕ್ತವಾಗಿತ್ತು ಎಂಬುದು ಪ್ರಶ್ನಾರ್ಹವಾದ ಸಂಗತಿಯಾಗಿ ಉಳಿಯಿತು. ಪಾಶ್ಚಾತ್ಯರು ರಚಿಸಿದ ಇತಿಹಾಸವನ್ನೇ ನಮ್ಮ ವಿದ್ಯಾರ್ಥಿಗಳು ಕಲಿಯುವುದು ಎಷ್ಟರ ಮಟ್ಟಿಗೆ ಸರಿ? ನಮ್ಮ ಧರ್ಮ, ಸಂಸ್ಕೃತಿ, ಶಾಸ್ತ್ರಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ, ತಮ್ಮ ಹಿತಾಸಕ್ತಿಗಾಗಿ ಅವರು ಹೇಳುವ ಇತಿಹಾಸವನ್ನೇ ಸತ್ಯವೆಂದು ನಾವು ಒಪ್ಪಿಕೊಳ್ಳಬೇಕೆ? - ಹೀಗೆ ಸಂದೇಹದ ದೃಷ್ಟಿಯಲ್ಲೇ ಎಲ್ಲವನ್ನೂ ಕಂಡ ವಿದ್ವಾಂಸರ ಒಂದು ವರ್ಗ ನಮ್ಮಲ್ಲಿತ್ತು. ಆದರೆ ವಿದ್ಯಾಭ್ಯಾಸ ಕ್ರಮವನ್ನು ಆಧುನಿಕ ಪಾಶ್ಚಾತ್ಯ ಕ್ರಮದಲ್ಲೇ ಭಾರತದಲ್ಲಿ ರೂಪಿಸಿ, ಪ್ರಚುರಪಡಿಸಿದ್ದರಿಂದ, ಸ್ವಾತಂತ್ರ್ಯ ಬಂದ ಬಳಿಕವೂ ನಮ್ಮಲ್ಲಿ ಇತಿಹಾಸದ ಅಧ್ಯಯನ ಹಾಗೂ ರಚನೆ ಸಂಪೂರ್ಣ ಸ್ವತಂತ್ರವಾಗಿ ನಡೆಯಲಿಲ್ಲ.

## ನೂತನ ಅನ್ವೇಷಣೆಗಳು ಹಾಗೂ ಹೊಸ ವಿಚಾರಧಾರೆಗಳು

ಆದರೆ, ಇಷ್ಟರಿಂದ ಭಾರತದ ಇತಿಹಾಸ ಸಂಪೂರ್ಣವಾಗಿ ಪಾಶ್ಚಾತ್ಯ ವಿದ್ವಾಂಸರ ನೆರಳಿನಲ್ಲಿಯೇ ಮುಂದುವರಿಯಿತು, ಅದು ಭಾರತದ ನೈಜ ಇತಿಹಾಸವಾಗಲಿಲ್ಲ ಎಂದು ಹೇಳಲಾಗದು. ಕಾರಣ, ೧೮-೧೯ನೇ ಶತಮಾನದ ಹೊತ್ತಿಗೆ ಪಶ್ಚಿಮದಲ್ಲಾದ ವೈಜ್ಞಾನಿಕ ಪ್ರಗತಿಯ ಪ್ರಭಾವ ಭಾರತದಲ್ಲೂ ವ್ಯಾಪಿಸತೊಡಗಿ, ಹೊಸ ಹೊಸ ಐತಿಹಾಸಿಕ ದಾಖಲೆಗಳನ್ನು (ಶಾಸನಗಳು, ಐತಿಹಾಸಿಕ ನಿವೇಶನಗಳಾಗಿರುವ ಕಟ್ಟಡಗಳು, ವಾಸ್ತುಶಿಲ್ಪ- ದೇವಾಲಯ ಇತ್ಯಾದಿಗಳು, ತಾಳೆಗರಿಯ ಗ್ರಂಥಗಳು, ನಾಣ್ಯ ಮುಂತಾದವು) ಅನಾವರಣಗೊಳಿಸುವ ಕಾರ್ಯ ಎಲ್ಲೆಡೆ ಆರಂಭವಾಯಿತು. ಇದರ ಫಲವಾಗಿ ಅಲ್ಲಿಯವರೆಗೂ ತಿಳಿಯದಿದ್ದ ಅನೇಕ ಸಂಗತಿಗಳು ಅನಾವರಣಗೊಂಡು, ಭಾರತದ ಇತಿಹಾಸದ ದಿಕ್ಕೇ ಬದಲಾಗತೊಡಗಿತು.

ಉದಾಹರಣೆಗೆ, ಸಿಂಧೂ ನದೀ ನಾಗರಿಕತೆ. ೧೯೨೦ರ ದಶಕದಲ್ಲಿ ಮೊತ್ತಮೊದಲ ಬಾರಿಗೆ ಈ ನಾಗರಿಕತೆಯನ್ನು ಉತ್ಖನನ ಮಾಡಲಾಯಿತು. ಅಲ್ಲಿಯವರೆಗೂ ತಿಳಿಯದಿದ್ದ ಈ ನಾಗರಿಕತೆ ಭಾರತದ ಇತಿಹಾಸದ ಗತಿಯನ್ನೇ ಬದಲಾಯಿಸಿತು. ಪ್ರಪಂಚದ ಅತ್ಯಂತ ಪ್ರಾಚೀನ ನಾಗರಿಕತೆಗಳಲ್ಲಿ ಒಂದೆಂದು ಪರಿಗಣಿಸಲಾದ ಈ ಅನ್ವೇಷಣೆಯು, ಭಾರತೀಯ ಸಂಸ್ಕೃತಿ, ಸಮಾಜ, ಜನಜೀವನ ಯಾವ ರೀತಿ ಇಂತಹ ಪ್ರಾಚೀನ ನಾಗರಿಕತೆಯೊಂದಿಗೆ ಸಂಬಂಧಿಸಿದೆ ಎಂಬ ವಿಶ್ಲೇಷಣೆಗೆ ಅಪಾರ ಅವಕಾಶವನ್ನು ಮಾಡಿಕೊಟ್ಟಿತ್ತು.

ಇದರೊಂದಿಗೆ, ಇಂತಹ ಹೊಸ ಅನ್ವೇಷಣೆಗಳಿಂದಾಗಿ ಕೊನೆಯಿಲ್ಲದ ಚರ್ಚೆ, ಬಿಕ್ಕಟ್ಟು, ವಾಗ್ವಾದಗಳೂ ನಡೆದು, ಯಾವ ಇತ್ಯರ್ಥಕ್ಕೂ ಬರಲಾಗದ ಸ್ಥಿತಿಗಳೂ ನಿರ್ಮಾಣವಾದದ್ದಿದೆ. ಮೇಲೆ ಹೇಳಿದ ಸಿಂಧೂ ನದೀ ತೀರದ ನಾಗರಿಕತೆಯಲ್ಲಿ ಸಿಕ್ಕಿದ ಹಲವಾರು ಅವಶೇಷಗಳಲ್ಲಿ ವಿಪುಲವಾಗಿ ದೊರಕಿದ ಬರಹಗಳ ಭಾಷೆ ಯಾವುದು ಎಂಬುದನ್ನು ಇಂದಿನವರೆಗೂ ಪತ್ತೆ ಹಚ್ಚಲಾಗಿಲ್ಲ. ಇದರಿಂದ ಬಹುಪಾಲು ಐತಿಹಾಸಿಕ ಅಂಶಗಳು ಇನ್ನೂ ನಿಗೂಢವಾಗಿಯೇ ಉಳಿದಿವೆ. ಅದೇ ರೀತಿ, ಪಾಶ್ಚಾತ್ಯ ವಿದ್ವಾಂಸರಿಂದ ಆರಂಭಗೊಂಡ ಆರ್ಯ-ದ್ರಾವಿಡ ಜನಾಂಗಗಳ ಸಿದ್ಧಾಂತ, ಆರ್ಯರು ಆಕ್ರಮಣ ಮಾಡಿ ಭಾರತಕ್ಕೆ ಬಂದರೆಂಬ ವಾದ ಅತ್ಯಂತ ವ್ಯಾಪಕವಾದ ಚರ್ಚೆಗೆ ಒಳಪಟ್ಟಿವೆ. ಇವು ಭಾರತೀಯ ಇತಿಹಾಸದ ಸ್ಪಷ್ಟ ಚಿತ್ರಣವನ್ನು ಕಟ್ಟಿಕೊಡುವ ಬದಲು, ಒಟ್ಟು ಇತಿಹಾಸದ ಅಧಿಕೃತತೆಯನ್ನೇ ಪ್ರಶ್ನಿಸುವಷ್ಟು ದೂರಕ್ಕೆ ಹೋಗಿವೆ.

ಇಷ್ಟರ ನಡುವೆಯೇ ಭಾರತದ ಇತಿಹಾಸವನ್ನು ಸಮಗ್ರವಾಗಿಯೂ, ಆದಷ್ಟು ಸತ್ಯನಿಷ್ಠವಾಗಿಯೂ ರಚಿಸುವ ಪ್ರಾಮಾಣಿಕ ಪ್ರಯತ್ನಗಳು ಕೂಡ ನಮ್ಮಲ್ಲಿ ನಡೆದಿವೆ. ಸಾಂಪ್ರದಾಯಿಕವಾಗಿ ಪುರಾಣೇತಿಹಾಸಗಳು ಹೇಳುವ ಕಥೆಗಳಿಗಿಂತ ಭಿನ್ನವಾಗಿ, ಐತಿಹಾಸಿಕ ಕುರುಹುಗಳನ್ನು ಆಧರಿಸಿ ನಿರ್ಮಿತವಾದ ಇತಿಹಾಸಕ್ಕೆ ಮನ್ನಣೆ ನೀಡುವ ಒಂದು ಸನ್ನಿವೇಶ ಭಾರತದಲ್ಲಿ ನಿರ್ಮಾಣವಾಯಿತು. ಹಲವರು ಏರುಪೇರು, ತರ್ಕ-ವಿತರ್ಕ, ಸಂಶೋಧನೆ, ವಿಶ್ಲೇಷಣೆ ಹಾಗೂ ನಿರೂಪಣೆಗಳ ನಡುವೆ 'ನಮ್ಮದೂ ಒಂದು ಸುದೀರ್ಘ ಇತಿಹಾಸ' ಎಂದು ಹೇಳುವಂತಾಯಿತು.

## ಇತಿಹಾಸ ಮತ್ತು ಸಂಸ್ಕೃತಿ

'ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆಯೇ ಇಲ್ಲ'ವೆಂಬ ಹಿಂದಿನ ವಾದ ಬಿದ್ದುಹೋಗಿ, ನಮ್ಮ ಇತಿಹಾಸವು ನಮ್ಮ ಸಂಸ್ಕೃತಿಯನ್ನು ಹೊಸದಾಗಿ ಕಾಣುವ ಒಂದು ವಿಧಾನವೆಂದೂ, ಇನ್ನೂ ಹರಿಯುತ್ತಿರುವ ನಮ್ಮ ಸಂಸ್ಕೃತಿಯನ್ನು ಗಟ್ಟಿಗೊಳಿಸುವ ಒಂದು ಪ್ರಧಾನ ಸಂಗತಿಯೆಂದೂ ಹಲವರು ಮನಗಂಡರು. ವೈದಿಕ ಸಾಹಿತ್ಯ, ಲೌಕಿಕ ಸಾಹಿತ್ಯ, ನಮ್ಮ ಧರ್ಮ-ಕಲೆ-ಜೀವನ ಪದ್ಧತಿ

ಇವುಗಳನ್ನು ಐತಿಹಾಸಿಕವಾಗಿ ಅರಿತಲ್ಲದೆ 'ಭಾರತೀಯ' ವಾದ ಒಂದು ಸಂಸ್ಕೃತಿಯನ್ನು ಕಂಡುಕೊಳ್ಳುವುದು ಅಸಾಧ್ಯವೆನಿಸಿತು. ಈ ಅರಿವು ಮೂಡುವ ಸಂದರ್ಭದಲ್ಲೇ ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಮುಂಬೆಳಗು ಕಾಣಿಸಿಕೊಂಡಿತು. ಇದು ಮತ್ತೆ ನಮ್ಮ ದೇಶದ ಧರ್ಮ-ಸಂಸ್ಕೃತಿಯನ್ನು ಕಟ್ಟುವ, ದಾಸ್ಯದಿಂದ ಹೊರಬಂದು ಒಂದು ದೇಶವನ್ನು ನಿರ್ಮಿಸುವ ಹುಮ್ಮಸ್ಸಾಗಿ ಮಾರ್ಪಟ್ಟಿತು. ತಿಲಕ್, ಗೋಖಲೆ ಮುಂತಾದವರ ನೇತೃತ್ವದಲ್ಲಿ ನಡೆದ ರಾಜಕೀಯ ಚಳುವಳಿ, ರಾಮಕೃಷ್ಣ-ವಿವೇಕಾನಂದ ಹಾಗೂ ಇನ್ನಿತರ ಧಾರ್ಮಿಕ ನೇತಾರರಿಂದ ಆರಂಭಗೊಂಡ ಆಧ್ಯಾತ್ಮಿಕ ಪುನರುತ್ಥಾನ ಭಾರತೀಯ ಇತಿಹಾಸದ ಹೊಸ ನಿರ್ಮಾಣಕ್ಕೂ ಪ್ರೇರಕವಾಗಿದ್ದುವು ಎಂಬುದನ್ನಿಲ್ಲಿ ಮರೆಯಬಾರದು. ರಾಷ್ಟ್ರೀಯತೆ, ದೇಶಭಕ್ತಿ ಇವುಗಳನ್ನು ಯುವಜನತೆಯಲ್ಲಿ ಹರಡಲು ನಮ್ಮ ಇತಿಹಾಸ ಅತ್ಯುತ್ತಮ ಮಾಧ್ಯಮವೆಂಬುದು ಈ ಸಂದರ್ಭದಲ್ಲಿ ಸಾಬೀತಾಯಿತು.

### ಸನಾತನ ಧರ್ಮವೆಂಬ ಅಮರಗಂಗೆ

ಆಧುನಿಕ ಹಾಗೂ ಪ್ರಾಚೀನ-ಎರಡೂ ದೃಷ್ಟಿಕೋನಗಳನ್ನು ಸಮೀಕರಿಸಿ, ನಮ್ಮ ಇತಿಹಾಸವನ್ನು ಹೊಸ ವ್ಯಾಖ್ಯಾನದೊಂದಿಗೆ ರಚಿಸಬಹುದಾಗಿದೆ. ಇದು 'ಭಾರತೀಯ'ವಾದ, ಇಲ್ಲಿನ ವಿಶಿಷ್ಟವಾದ ದೃಷ್ಟಿಕೋನವನ್ನು ಒಳಗೊಂಡ ಐತಿಹಾಸಿಕ ವಿಧಾನವಾಗುತ್ತದೆ. ಭಾರತದ ಸನಾತನ ಧರ್ಮದ ಸ್ವರೂಪವನ್ನು ಅರಿಯಲು ಇಂತಹ ಒಂದು ವಿಧಾನದಿಂದ ಮಾತ್ರ ಸಾಧ್ಯ.

ಈ ಅಂಶವನ್ನು ಇನ್ನಷ್ಟು ವಿಶದೀಕರಿಸಿ ನೋಡಬಹುದು. ಭಾರತದ ಇತಿಹಾಸವನ್ನು ಈಗಾಗಲೇ ಸಿದ್ಧಪಡಿಸಲಾದ ಆಧುನಿಕ ಕ್ರಮದಿಂದ ನೋಡುವುದಿದ್ದರೆ, ಬ್ರಿಟಿಷರ ಆಳ್ವಿಕೆ-ಅದಕ್ಕೂ ಮುನ್ನ ಮೊಗಲರ ಆಳ್ವಿಕೆ; ಅದಕ್ಕೂ ಮುನ್ನ ಹಲವು ಸಣ್ಣಸಣ್ಣ ರಾಜ್ಯಗಳು, ಉತ್ತರ-ದಕ್ಷಿಣದಲ್ಲಿ ಆಳಿದ ರಾಜ್ಯಗಳು, ಗುಪ್ತ-ಮೌರ್ಯ ಮುಂತಾದ ವಂಶಗಳು ಆಳಿದ ಬೃಹತ್ ಸಾಮ್ರಾಜ್ಯಗಳು, ಜೈನ, ಬೌದ್ಧ, ವೈದಿಕ ಧರ್ಮಗಳು, ದಾರ್ಶನಿಕ ಪರಂಪರೆ, ವೈದಿಕಯುಗ, ಸಿಂಧೂ ನಾಗರಿಕತೆ – ಇವಿಷ್ಟನ್ನು ನಿರೂಪಿಸಬಹುದು. ಆದರೆ ಇದಕ್ಕೂ ಮುನ್ನ ಏನಿತ್ತು ? ವೈದಿಕಯುಗವನ್ನು 'ಸುಮಾರು ಇಷ್ಟನೇ ಶತಮಾನ' ಎನ್ನಲಾಗುತ್ತಿದೆ; ಅದು ಎಷ್ಟರಮಟ್ಟಿಗೆ ನಿಜ? ಶಂಕರಾಚಾರ್ಯ, ಕಾಳಿದಾಸ ಮುಂತಾದ ಪ್ರಮುಖ ವ್ಯಕ್ತಿಗಳ ಕಾಲವನ್ನೇ ಒಂದು ಸಾವಿರ ವರ್ಷಗಳವರೆಗೆ ಎಳೆದಾಡಿ ನಾನಾ ಬಗೆಯ ವಾದಗಳನ್ನು ಹುಟ್ಟುಹಾಕಿ ಚರ್ಚಿಸಲಾಗಿದೆ. ಹೀಗಿರುವಾಗ ಆಧುನಿಕ ಇತಿಹಾಸವು ಎಷ್ಟರಮಟ್ಟಿಗೆ 'ನಿಜವಾದ ಇತಿಹಾಸ'ವನ್ನು ಕಟ್ಟಿಕೊಡುತ್ತಿದೆ? — ಈ ಸಂದೇಹಗಳಿಗೆ ಉತ್ತರ ಇನ್ನೂ ಲಭಿಸಬೇಕಿದೆ.

ಇದರೊಂದಿಗೆ ಭಾರತೀಯವೇ ಆಗಿರುವ ನಮ್ಮ ಸಾಂಪ್ರದಾಯಿಕ ದೃಷ್ಟಿಕೋನವನ್ನು ಬೆಸೆಯಬೇಕಾಗಿದೆ. ಇತಿಹಾಸವನ್ನು ಕಾಲಕ್ರಮದಲ್ಲಿ (chronologically) ದಾಖಲಿಸುವ ಪದ್ಧತಿಯೇ ಆಧುನಿಕ ಪದ್ಧತಿ. ಆದರೆ ಭಾರತದಲ್ಲಿ ಇತಿಹಾಸವನ್ನು ನೋಡುವ ರೀತಿ ಬೇರೆ. ಇಲ್ಲಿ ಎಲ್ಲವೂ 'ಚಕ್ರಗತಿ' ಎಂದರೆ, ಚತು ರ್ಯುಗಗಳು ಒಂದಾದ ಮೇಲೊಂದು ಬಂದು, ಮತ್ತೆ ಮೊದ ಲಿನ ಯುಗವೇ ಆವರ್ತಿಸುವುದು. 'ಸನಾತನ ಧರ್ಮ'ವೆಂದು ಕರೆಯುವ ವೈದಿಕ ಆದರ್ಶ, ತತ್ತ್ವಗಳು ಅಳಿವಿಲ್ಲದ್ದೆಂದೂ, ಆದಿ-ಅಂತ್ಯಗಳಿಲ್ಲದ್ದೆಂದೂ, ಅವ್ಯಕ್ತ ತತ್ತ್ವಗಳಿಂದ ಉತ್ಪನ್ನ ಗೊಂಡ ಈ ಧರ್ಮವು ಎಂದೆಂದಿಗೂ ಈ ದೇಶದ ಆಧ್ಯಾತ್ಮಿಕ ಆದರ್ಶ ಹಾಗೂ ಮುನ್ನಡೆಸುವ ಶಕ್ತಿಯಾಗಿದೆಯೆಂದೂ ಸ್ವಾಮಿ ವಿವೇಕಾನಂದರೇ ಹೇಳುತ್ತಾರೆ. *(ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ, ಸಂಪುಟ ೫, 'ಹಿಂದೂಧರ್ಮ ಮತ್ತು ಶ್ರೀರಾಮಕೃಷ್ಣ', ಪು.೩೮೩)* ಈ ಬಗೆಯ ಅಲೌಕಿಕದೃಷ್ಟಿ, ಆಧ್ಯಾತ್ಮಿಕ ಆದರ್ಶ ಭಾರತೀಯರ ಜೀವನದ ಅವಿಭಾಜ್ಯ ಅಂಗವೇ ಆಗಿದೆ. ಆದ್ದ ರಿಂದ ಇದನ್ನು ಅರಿತುಕೊಂಡೇ ಇತಿಹಾಸ ನಿರ್ಮಿಸಬೇಕು. ಇತಿಹಾಸವು ಎಷ್ಟೇ ವೈಜ್ಞಾನಿಕವಾಗಿರಲಿ, ಇತಿಹಾಸವು ಎಷ್ಟೇ ಚಾರಿತ್ರಿಕ ದಾಖಲೆಗಳನ್ನು ಅವಲಂಬಿಸಿರಲಿ, ಜನಸಾಮಾನ್ಯರ ಬದುಕಿನಲ್ಲಿ ಹಾಸು-ಹೊಕ್ಕಾಗಿರುವ ಅಲೌಕಿಕ ತತ್ತ್ವ, ಆಧ್ಯಾತ್ಮಿಕ ಆದರ್ಶಗಳನ್ನು ಮರೆಯಬಾರದು. ಇತಿಹಾಸವು ಸಂಸ್ಕೃತಿಗೆ ಪೋಷಕವಾಗಿರಬೇಕು, ಮಾರಕವಾಗಿರಬಾರದು. ಅಂದರೆ, ಈ ಅವ್ಯಕ್ತ ತತ್ತ್ವಗಳು ಚಾರಿತ್ರಿಕ ದಾಖಲೆಗಳಿಗೆ ವಿರೋಧವಾಗವೆ? — ಎಂಬ ಪ್ರಶ್ನೆ ಏಳಬಹುದು. ಇದಕ್ಕೆ ಉತ್ತರ: ಲೌಕಿಕ-ಅಲೌಕಿಕ ಇವೆರಡೂ ವಿರುದ್ಧವಲ್ಲ; ಅಂತಿಮವಾಗಿ ಅವೆರಡೂ ಒಂದೇ ಎಂದು ವೇದಗಳು ಸಾರುತ್ತವೆ (ನೋಡಿ: 'ಪೂರ್ಣಮದಃ ಪೂರ್ಣಮಿದಂ' ಎಂಬ ಶಾಂತಿಮಂತ್ರ). ಭಾರತೀಯ ಆಧ್ಯಾತ್ಮಿಕತೆಯನ್ನು ವಿಜ್ಞಾನದ ಒರೆಗಲ್ಲಿನಲ್ಲಿ ಪರೀಕ್ಷೆಗಿಟ್ಟಾಗ ಅದು ಪುಟಕ್ಕಿಟ್ಟ ಚಿನ್ನದಂತೆ ಇನ್ನಷ್ಟು ಉಜ್ವಲವಾಗಿ ಬೆಳಗುವುದೆಂದು ಸ್ವಾಮಿ ವಿವೇಕಾನಂದರು ಸಾರುತ್ತಾರೆ. ನಮ್ಮ ದೇಶದ ಸಂಸ್ಕೃತಿ, ರಾಷ್ಟ್ರೀಯತೆ ಇವುಗಳನ್ನು ಗಟ್ಟಿಗೊಳಿಸುವಲ್ಲಿ ಈ ಸನಾತನ ತತ್ತ್ವಗಳು ಅತ್ಯಂತ ಶಕ್ತಿಯುತವಾದ ಮಾಧ್ಯಮಗಳಾಗಿವೆ. ಇತಿಹಾಸವು ಈ ಮಾಧ್ಯಮಗಳನ್ನು ಅವಲಂಬಿಸಿರಬೇಕು; ಅದೇ ರೀತಿ ಈ ಮಾಧ್ಯಮಗಳನ್ನು ಬಲಗೊಳಿಸುವಂತಿರಬೇಕು. ಆಗ ಮಾತ್ರ ನಮ್ಮ ಇತಿಹಾಸ 'ನಿಜವಾದ ಇತಿಹಾಸ'ವಾಗುತ್ತದೆ; ಸತ್ಯವನ್ನು ಆಧರಿಸಿದ

**ಫೆಬ್ರವರಿ ತಿಂಗಳ ಕಾರ್ಯಕ್ರಮಗಳು**

| | | |
|---|---|---|
| ೨ | ಬುಧವಾರ | ಸ್ವಾಮಿ ಬ್ರಹ್ಮಾನಂದ ಜಯಂತಿ |
| ೪ | ಶುಕ್ರವಾರ | ಸ್ವಾಮಿ ತ್ರಿಗುಣಾತೀತಾನಂದ ಜಯಂತಿ |
| ೧೨ | ಶನಿವಾರ | ಏಕಾದಶಿ |
| ೧೬ | ಬುಧವಾರ | ಸ್ವಾಮಿ ಅದ್ಭುತಾನಂದ ಜಯಂತಿ |
| ೨೬ | ಶನಿವಾರ | ಏಕಾದಶಿ |